ಮನವೆ ಚಂಚಲ ಮತಿಯ ಬಿಡು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 436.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 420.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 45.
4. **Note:** Lyrics mentioned without highlights are as per Ref. 1 and Ref. 2. The wordings given in yellow highlights are as per Ref. 3.
5. **Note:** Singer has followed the lyrics as in Ref. 1.

ರಾಗ: ಮಧ್ಯಮಾವತಿ (ಸಾರಂಗ) ತಾಳ: ಆದಿ (ಅಟ್ಟ)

ಮನವೆ ಚಂಚಲಮತಿಯ ಬಿಡು || ಪ ||
ನಮ್ಮ ವನಜನಾಭನ (ಪಾದ) ಭಜನೆಯ ಮಾಡು || ಅಪ ||

ಬಡ ಮನುಜಗೆ ಬಾಯಬಿಡುತ ದೈನ್ಯದಲವನ
ಅಡಿಗಳಿಗೆರಗಲು (ಪಡೆವುದೇನೊ) (ಕೊಡುವನೇನೊ)
ಕಡಲ ಶಯನ ಜಗದೊಡೆಯನ ನೆನೆಯೆ ಕೈ-
ಪಿಡಿದು (ಸಲಹುವನು) (ತಾ ಸಲಹುವ) ಬಿಡದಲೆ ಅನುಗಾಲ || 1 ||

ಬಲ್ಲಿದ ಭಜಕರ ಬಲ್ಲವ, (ಬಲುಸಿರಿ-) (ಬಹುಸಿರಿ-)
(-ಯುಳ್ಳನು, ಕರುಣಿಯು ನಲ್ಲನಿರೆ) (-ಯುಳ್ಳ ಕರುಣಿ ಲಕ್ಷ್ಮಿ ನಲ್ಲನಿರೆ)
ಕ್ಷುಲ್ಲಕರನು ಕಾಯೆ ಸಲ್ಲದೆಂದೆಂದಿಗು
ನಿಲ್ಲು ಹರಿಯ ಪಾದದಲ್ಲಿ ತಲ್ಲಣಿಸದೆ || 2 ||

(ಮುಗಿಲು ಮೇಲುಗಡೆ ಅಗಣಿತ ಆಪ- (ಮುಗಿಲು ಮೇಲಡೆಗಡೆ ಅಗಣಿತವಾದಾ- ಪತ್ತುಗಳು)
ತ್ತುಗಳು) ಬಂದಡರಲು ನಗುತಲಿರು
(ಜಗದುದರನ) (ಜಗದಧೀಶನ) ಮಹಿಮೆಗೆ ನಮೋ ನಮೋ ಎಂದು

(ಪೊಗಳುತ್ತ ಬಾಳಘಗಳನು ಗಣಿಸದಲೆ) || 3 ||
(ಪೊಗಳುತ ಬಾಳು ನೀ ಅಘಗಳ ಗಣಿಸದೆ)

ಆವಾವ ಕಾಲಕ್ಕೆ ದೇವನಿಚ್ಛೆಯಿಂದ
ಆವಾವುದು ಬರೆ (ಸುಖವೆ ಎನ್ನು) (ನಿಜ-ಸುಖವೆನ್ನು)
ಶ್ರೀವರ ಅನಾದಿ ಜೀವರ ಕ್ಲಪ್ತದಂತೆ
ಈವನು ನಿಜ ಸ್ವಭಾವ ಬಿಡದೆ ನಿತ್ಯ || 4 ||

ಕೇಶವಾಚ್ಯುತ ಶ್ರೀನಿವಾಸ ಮುರಾರೇ
ದೋಷರಹಿತ (ಕ್ಲೇಷ ನಾಶನನೆಂದು) (ದೀನ ಪೋಷಕನೆನ್ನು)
ಮೋಸಗೊಳಿಪ ಭವ ಪಾಶವ ಖಂಡಿಪ
ಶ್ರೀಶ ಪುರಂದರ ವಿಠಲನು ಜಗಕಿರೆ || 5 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಬಡಮನುಜಗೆ – ಹುಲುಮಾನವನಿಗೆ.

ನಲ್ಲ – ಪ್ರಿಯ.

ಕ್ಷುಲ್ಲಕರನು ಕಾಯೆ – ಕ್ಷುದ್ರರಾದ ಮನುಷ್ಯರ ಬಾಗಿಲು ಕಾಯುವುದು.

ಬಾಳಘಗಳನು – ಬದುಕಿನ ಪಾಪಗಳನ್ನು.

ಕ್ಲುಪ್ತ = ವಿಧಿ ನಿಯಮಿಸಿದಂತೆ

ಕ್ಲಪ್ತದಂತೆ... – ಕ್ರಮದಂತೆ; ಪ್ರತಿಜೀವರ ಯೋಗ್ಯತಾನುಸಾರವಾಗಿ ಕರ್ಮಫಲಗಳನ್ನು ಪರಮಾತ್ಮನು (ಶ್ರೀವರ) ಒದಗಿಸಿಕೊಡುವನು (ಈವನು); ಅವನಿಗೆ ಜೀವರನ್ನು ಕುರಿತು ಆದರ, ನಿರಾದರಗಳಿಲ್ಲ; ಕರ್ಮಫಲ ಕೊಡುವಾಗಲೂ ಅವನಿಗೆ ಸ್ವಭಾವ ಸಿದ್ಧವಾದ ಕಾರುಣ್ಯ ಮರೆಯಾಗುವುದಿಲ್ಲ (ನಿಜ ಸ್ವಭಾವ ಬಿಡದೆ).

ಕಾಯಸಲ್ಲ = ನೀಚರನ್ನು ಯಾಚಿಸದಿರು

ಹರಿಯ ಪಾದದಲ್ಲಿ ನಿಲ್ಲು = ಹರಿಯನ್ನು ಆಶ್ರಯಿಸು

ಅಡೆಗೆಡೆ = ಬೀಳು

ಶ್ರೀವರ = ಲಕ್ಷ್ಮೀ ಪತಿ

ನಿಜ ಸ್ವಭಾವ ಬಿಡದೆ = ಭಕ್ತರ ಮೂಲ ಸ್ವರೂಪಕ್ಕೆ ಅನುಗುಣವಾಗಿ ತಪ್ಪದೆ

Classification: Keerthane
Ankita: srisha purandara vittala
Location: NA
Category: Bhakti, Jeevanoddhara, Aartha Bhava
Sub-Category: mana, bhajane, nara, dainya, Samudra, loka, kai, karuna, Krishna, akasha, aganita, nage, papa, deva, sukha, keshava, srinivasa, mosa, bhava,
Pravachana: NA
Explanation: NA